**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಕೇಸ್ ನಂ. 49/2024**

ಪ್ರಾ.ಸಾ. 10

ಚಾ.ಸಾ. 13

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.10.2025**

| | |
|---|---|
| ಸಾಕ್ಷಿದಾರರ ಹೆಸರು | ಡಾ.ಶೀಲಾ.ಹೆಚ್.ಎಲ್. |
| ಗಂಡನ ಹೆಸರು | ಡಾ.ಗಿರೀಶ್.ಕೆ.ಎಂ. |
| ವಯಸ್ಸು | 41 ವರ್ಷ |
| ಉದ್ಯೋಗ | ಹಿರಿಯ ತಜ್ಞರು, ಮದ್ದೂರು ಸರ್ಕಾರಿ ಆಸ್ಪತ್ರೆ |
| ವಾಸ | ಮದ್ದೂರು |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು ಆಗಸ್ಟ್ 2020 ರಿಂದ ಇಲ್ಲಿಯವರೆಗೆ ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

.

.2. ದಿನಾಂಕ 11.03.2023 ರಂದು ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 12.55 ಗಂಟೆ ಸಮಯಕ್ಕೆ ಉಮೇಶ ಎಂಬುವವರು ಆಸ್ಪತ್ರೆಗೆ ಚಿಕಿತ್ಸೆಗೆ ಬಂದರು. ಅವರು ಅದೇ ದಿನ ತನಗೆ 5-6 ಜನರು 11.00 ಗಂಟೆ ಸಮಯಕ್ಕೆ ಹೊಡೆದಿದ್ದಾರೆ ಎಂದು ಹೇಳಿ ಚಿಕಿತ್ಸೆಗೆ

ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿ ಗಾಯಗಳಿಗೆ ಹೊಲಿಗೆ ಹಾಕಿ ಬ್ಯಾಂಡೇಜ್ ಮಾಡಿದೆ. ನಾನು ಅವರನ್ನು ಹೊರರೋಗಿಯಾಗಿ ದಾಖಲಿಸಿ ಚಿಕಿತ್ಸೆ ನೀಡಿದ್ದೇನೆ. ಅವರಿಗೆ ಚಿಕಿತ್ಸೆ ನೀಡಿದ ಬಾಬ್ತು ಪೊಲೀಸರಿಗೆ ಉಮೇಶರವರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅವರಿಗೆ ಈ ಕೆಳಗಿನ ಗಾಯಗಳು ಆಗಿದ್ದವು.

.a. Laceration wound 4x0.5 cm on the left upper shoulder.

.b. Abrasion on the both knee. ಅವರಿಗೆ ನೀಡಿದ ಗಾಯದ ಪ್ರಮಾಣ ಪತ್ರ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಶಾನೆ ಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.14 ಎ ಎಂದು ಗುರುತಿಸಲಾಗಿದೆ. ಉಮೇಶ ರವರು ಹಲ್ಲೆ ಬಾಬ್ತು ಚಿಕಿತ್ಸೆ ಪಡೆದ ಕಾರಣ ಸದರಿ ವಿಚಾರವನ್ನು ನಾವು ಸಂಬಂಧಿಸಿದ ಠಾಣೆಗೆ ತಿಳಿಸಿದ್ದೇವೆ ಆ ಬಾಬ್ತು ನಮ್ಮ ಆಸ್ಪತ್ರೆಯಲ್ಲಿ ಎಂಎಲ್‌ಸಿ ದಾಖಲಿಸಿ ಮಾಹಿತಿಯನ್ನು ಠಾಣೆಗೆ ನೀಡಿದ್ದೇವೆ. ಸದರಿ ಎಂ ಎಲ್ ಸಿ ಪ್ರತಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಎಂ ಎಲ್ ಸಿ ಪ್ರತಿಯನ್ನು ನಿಪಿ.15 ಎಂದು ಸಾಕ್ಷಿಯ ಸಹಿಯನ್ನು ನಿಪಿ.15 ಎ ಗುರುತಿಸಲಾಗಿದೆ.

.

.3. ಅದೇ ದಿನ ಅಂದರೆ ದಿನಾಂಕ 11.03.2023 ರಂದು ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 12.55 ಗಂಟೆ ಸಮಯಕ್ಕೆ ವಿನಯ್ ಕುಮಾರ್ ಎಂಬುವವರು ಆಸ್ಪತ್ರೆಗೆ ಚಿಕಿತ್ಸೆಗೆ ಬಂದರು. ಅವರು ಅದೇ ದಿನ ತನಗೆ 5−6 ಜನರು 11.00 ಗಂಟೆ ಸಮಯಕ್ಕೆ ಹೊಡೆದಿದ್ದಾರೆ ಎಂದು ಹೇಳಿ ಚಿಕಿತ್ಸೆಗೆ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿ ಗಾಯಗಳಿಗೆ ಹೊಲಿಗೆ ಹಾಕಿ ಬ್ಯಾಂಡೇಜ್ ಮಾಡಿದೆ. ನಾನು ಅವರನ್ನು ಹೊರರೋಗಿಯಾಗಿ ದಾಖಲಿಸಿ ಚಿಕಿತ್ಸೆ ನೀಡಿದ್ದೇನೆ. ಅವರಿಗೆ ಚಿಕಿತ್ಸೆ ನೀಡಿದ ಬಾಬ್ತು ಪೊಲೀಸರಿಗೆ ವಿನಯ್ ಕುಮಾರ್ ರವರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅವರಿಗೆ ಈ ಕೆಳಗಿನ ಗಾಯಗಳು ಆಗಿದ್ದವು.

.a. Laceration on the left flank 4x0.2 cm. ಅವರಿಗೆ ನೀಡಿದ ಗಾಯದ ಪ್ರಮಾಣ ಪತ್ರ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು  ನಿಶಾನೆ ಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.16 ಎ ಎಂದು ಗುರುತಿಸಲಾಗಿದೆ. ವಿನಯ್ ಕುಮಾರ್ ರವರು ಹಲ್ಲೆ ಬಾಬ್ತು ಚಿಕಿತ್ಸೆ ಪಡೆದ ಕಾರಣ ಸದರಿ ವಿಚಾರವನ್ನು ನಾವು ಸಂಬಂಧಿಸಿದ ಠಾಣೆಗೆ ತಿಳಿಸಿದ್ದೇವೆ ಆ ಬಾಬ್ತು ನಮ್ಮ ಆಸ್ಪತ್ರೆಯಲ್ಲಿ ಎಂಎಲ್‌ಸಿ ದಾಖಲಿಸಿ ಮಾಹಿತಿಯನ್ನು ಠಾಣೆಗೆ ನೀಡಿದ್ದೇವೆ. ಸದರಿ ಎಂ ಎಲ್ ಸಿ ಪ್ರತಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಎಂ ಎಲ್ ಸಿ ಪ್ರತಿಯನ್ನು ನಿಪಿ.17 ಎಂದು ಸಾಕ್ಷಿಯ ಸಹಿಯನ್ನು ನಿಪಿ.17 ಎ ಗುರುತಿಸಲಾಗಿದೆ.

.

.4. ಅದೇ ದಿನ ಅಂದರೆ ದಿನಾಂಕ 11.03.2023 ರಂದು ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಮದ್ಯಾಹ್ನ 12.55 ಗಂಟೆ ಸಮಯಕ್ಕೆ ಸತೀಶ ಎಂಬುವವರು ಆಸ್ಪತ್ರೆಗೆ ಚಿಕಿತ್ಸೆಗೆ ಬಂದರು. ಅವರು ಅದೇ ದಿನ ತನಗೆ 5–6 ಜನರು 11.00 ಗಂಟೆ ಸಮಯಕ್ಕೆ ಹೊಡೆದಿದ್ದಾರೆ ಎಂದು ಹೇಳಿ ಚಿಕಿತ್ಸೆಗೆ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿ ಗಾಯಗಳಿಗೆ ಬ್ಯಾಂಡೇಜ್ ಮಾಡಿದೆ. ಎಕ್ಸ್ ರೇ ಮಾಡಲು ಹೇಳಿದ್ದೇನೆ. ನಾನು ಅವರನ್ನು ಹೊರರೋಗಿಯಾಗಿ ದಾಖಲಿಸಿ ಚಿಕಿತ್ಸೆ ನೀಡಿದ್ದೇನೆ. ಅವರಿಗೆ ಚಿಕಿತ್ಸೆ ನೀಡಿದ ಬಾಬ್ತು ಪೊಲೀಸರಿಗೆ ಸತೀಶ ರವರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅವರಿಗೆ ಈ ಕೆಳಗಿನ ಗಾಯಗಳು ಆಗಿದ್ದವು.

.a. Swelling and Abrasion of the right lower 1/3 and upper 2/3 of forearm.

.b. Blunt trauma abdomen.  ಅವರಿಗೆ ನೀಡಿದ ಗಾಯದ ಪ್ರಮಾಣ ಪತ್ರ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಶಾನೆ ಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ.18 ಎ ಎಂದು ಗುರುತಿಸಲಾಗಿದೆ. ಸತೀಶ ರವರು ಹಲ್ಲೆ ಬಾಬ್ತು ಚಿಕಿತ್ಸೆ ಪಡೆದ ಕಾರಣ ಸದರಿ ವಿಚಾರವನ್ನು ನಾವು ಸಂಬಂಧಿಸಿದ ಠಾಣೆಗೆ ತಿಳಿಸಿದ್ದೇವೆ ಆ ಬಾಬ್ತು ನಮ್ಮ

ಆಸ್ಪತ್ರೆಯಲ್ಲಿ ಎಂಎಲ್‌ಸಿ ದಾಖಲಿಸಿ ಮಾಹಿತಿಯನ್ನು ಠಾಣೆಗೆ ನೀಡಿದ್ದೇವೆ. ಸದರಿ ಎಂ ಎಲ್ ಸಿ ಪ್ರತಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಎಂ ಎಲ್ ಸಿ ಪ್ರತಿಯನ್ನು ನಿಪಿ.19 ಎಂದು ಸಾಕ್ಷಿಯ ಸಹಿಯನ್ನು ನಿಪಿ.19 ಎ ಗುರುತಿಸಲಾಗಿದೆ.

.

.5. ಮೇಲೆ ಹೇಳಿದ ಮೂರೂ ಜನರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು ಮತ್ತು ಅದನ್ನು ನಾನು ಸಂಬಂಧಿಸಿದ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ.

.

. ನಿಪಿ.15, ನಿಪಿ.17, ನಿಪಿ.19 ಎಂ ಎಲ್ ಸಿ ರಿಜಿಸ್ಟರಿನ ಮೂಲ ದಾಖಲೆಯನ್ನು ಸಾಕ್ಷಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನ್ಯಾಯಾಲಯದ ಮುಂದೆ ಇರುವ ನಿಪಿ.15, ನಿಪಿ.17, ನಿಪಿ.19 ಜೊತೆ ಪರಿಶೀಲಿಸಿ ನೈಜತೆಯನ್ನು ಪರೀಕ್ಷಿಸಿ ಮೂಲ ದಾಖಲೆಯನ್ನು ಹಿಂದಿರುಗಿಸಲಾಯಿತು.

.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಗೈರು ಹಾಜರು. ಆರೋಪಿಗಳಿಗೆ ಪಾಟೀ ಸವಾಲು ಮಾಡಲು ಹೇಳಿದಾಗ ಅವರು ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.